ಹಿಂದೂ, ಮುಸ್ಲಿಮರನ್ನು ಒಡೆದು ಆಳುವ ಮೂಲಕವೇ ಅಧಿಕಾರ ಹಿಡಿಯುವ ಕೋಮುವಾದಿ ರಾಜಕಾರಣವನ್ನು ಎದುರಿಸುವ ಬಗೆಯನ್ನೂ ಲೋಹಿಯಾ ಸೂಚಿಸಿದರು:

'ಇಂದು ಹೈದರಾಬಾದ್‌ನಲ್ಲಿ ಹಿಂದೂಗಳು ಹಾಗೂ ಮುಸಲ್ಮಾನರು ಒಗ್ಗೂಡಿ ಸಾವಿರಗಟ್ಟಲೆ, ಅಷ್ಟೇ ಏಕೆ ಲಕ್ಷಾಂತರ ಎನ್ನೋಣ, ಯಾವುದೋ ಬೇಡಿಕೆಯ ಈಡೇರಿಕೆಗಾಗಿ ನಗರದಲ್ಲಿ ಮೂರ್‍ನಾಲ್ಕು ಮೈಲಿ ಮೆರವಣಿಗೆ ಹೊರಟರೆ, ಆಂಧ್ರಪ್ರದೇಶದಲ್ಲಿ ಮಾತ್ರವಲ್ಲ, ಇಡೀ ಭಾರತದಲ್ಲೇ ಮಿಂಚಿನ ಸಂಚಾರವಾಗುತ್ತದೆ. ಹಿಂದೂಗಳು ಮತ್ತು ಮುಸಲ್ಮಾನರು ಒಂದುಗೂಡಿ ಏನನ್ನೋ ಸಾಧಿಸಲು ಹೊರಟಿದ್ದಾರಲ್ಲ ಎಂದು ಎಲ್ಲರೂ ದಂಗಾಗಬಹುದು. ಇದು ಸಾಧ್ಯವಾಗುವುದು ಕೇವಲ ಹಿಂದೂಗಳು ಅಥವಾ ಮುಸಲ್ಮಾನರೆಂದು ಮತೀಯವಾಗಿ ಒಗ್ಗೂಡದೇ ತಮ್ಮ ತಮ್ಮ ಆಶಯಗಳ ದೃಷ್ಟಿಕೋನದಿಂದ ತಮಗೆ ಇಷ್ಟವಾದ ರಾಜಕೀಯವನ್ನು ಆಯ್ಕೆ ಮಾಡಿಕೊಂಡು ಒಗ್ಗೂಡಿದಾಗ ಮಾತ್ರ.

'ಶೇಕಡಾ ತೊಂಬತ್ತರಷ್ಟು ಪ್ರಶ್ನೆಗಳು ಜನಸಮುದಾಯಕ್ಕೆ ಸಂಬಂಧಿಸಿದವು. ಇವು ಎಲ್ಲರನ್ನೂ ಕಾಡುತ್ತವೆ. ಇವೆಂಥ ಪ್ರಶ್ನೆಗಳು ಎಂದರೆ, ಹಿಂದೂ, ಮುಸಲ್ಮಾನ ಎನ್ನುವ ಭೇದಭಾವ ಅವಕ್ಕಿಲ್ಲ. ಒರಟು ಬಟ್ಟೆಯ ಬೆಲೆ ಎಷ್ಟಿದೆ? ಸೀಮೆಎಣ್ಣೆ ಬೆಲೆ ಎಷ್ಟಿದೆ? ಭಾರತದ ಕೃಷಿ, ಕೈಗಾರಿಕೆ ಉತ್ಪನ್ನ ಯಾರಿಗೆ ಎಷ್ಟು ಸಿಕ್ಕಿತು? ಇವೆಲ್ಲ ಪ್ರಶ್ನೆಗಳು ಹಿಂದೂ, ಮುಸಲ್ಮಾನರಿಬ್ಬರಿಗೂ ಒಂದೇ ರೀತಿಯಲ್ಲಿ ಎದುರಾಗುವಂಥವು.'

ಹೀಗೆ ಧರ್ಮಭೇದ, ಜಾತಿಭೇದ, ವರ್ಗಭೇದ, ಲಿಂಗಭೇದ ಎಲ್ಲದರ ವಿರುದ್ಧವೂ ಚಿಂತನೆ, ಹೋರಾಟಗಳನ್ನು ರೂಪಿಸುತ್ತಿದ್ದ ಲೋಹಿಯಾ ಜಾಗತಿಕ ಮಟ್ಟದಲ್ಲಿ ವರ್ಣಭೇದದ ವಿರುದ್ಧವೂ ಪ್ರತಿಭಟಿಸುವ ಸನ್ನಿವೇಶವೊಂದು ಎದುರಾಯಿತು.

* * *

1964ರ ಏಪ್ರಿಲ್–ಮೇ ತಿಂಗಳಲ್ಲಿ ಲೋಹಿಯಾ ವಿವಿಧ ದೇಶಗಳ ಪ್ರವಾಸ ಕೈಗೊಂಡರು. ಅಮೆರಿಕದ ಅರಿಝೋನಾ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸ ಹಾಗೂ ಇತರ ಕಾರ್ಯಕ್ರಮಗಳೂ ಇದ್ದವು.

ಲೋಹಿಯಾ ತಮ್ಮ 1951ರ ಅಮೆರಿಕ ಪ್ರವಾಸದಲ್ಲಿ, 'ವರ್ಣಭೇದ ನೀತಿಯನ್ನು ಎದುರಿಸಲು ಆಫ್ರೋ–ಅಮೆರಿಕನ್ನರು ನಾಗರಿಕ ಅವಿಧೇಯತೆಯ ಗಾಂಧೀ ಮಾರ್ಗವನ್ನು ಅಪ್ಪಿಕೊಳ್ಳಬೇಕು' ಎಂದು ಹೇಳಿದ್ದರು. 1960ರಲ್ಲಿ ಮೈ ಬಣ್ಣ ಕುರಿತ ಎರಡು ಮಹತ್ವದ ಲೇಖನಗಳನ್ನು 'ಮ್ಯಾನ್‌ಕೈಂಡ್' ಪತ್ರಿಕೆಯಲ್ಲಿ ಬರೆದರು. 'ಬ್ಯೂಟಿ ಅಂಡ್ ಸ್ಕಿನ್ ಕಲರ್' ಲೇಖನದಲ್ಲಿ ಚರ್ಮದ ಬಣ್ಣಕ್ಕೂ ಸೌಂದರ್ಯಕ್ಕೂ ಸಂಬಂಧವಿಲ್ಲ ಎಂಬುದನ್ನು ಅನನ್ಯವಾಗಿ ತೋರಿಸಿಕೊಟ್ಟರು. 'ಸೌಂದರ್ಯ ಮತ್ತು ಮೈಬಣ್ಣ' ಎಂದು ಕೆ.ವಿ. ಸುಬ್ಬಣ್ಣ ಕನ್ನಡಿಸಿರುವ ಈ ಲೇಖನ ಭಾರತದ ಅನೇಕ ಭಾಷೆಗಳಿಗೆ ಅನುವಾದಗೊಂಡಿದೆ; ಕಪ್ಪು ಸೌಂದರ್ಯಮೀಮಾಂಸೆಯನ್ನೇ ಹುಟ್ಟು ಹಾಕಿದೆ. ಮಹಾಭಾರತದ ಕೃಷ್ಣ, ಹಾಗೂ 'ಕೃಷ್ಣೆ' ಎಂದೂ ಕರೆಯಲಾಗುವ ದ್ರೌಪದಿ ಇಬ್ಬರೂ ಕಪ್ಪಗಿದ್ದರು ಎಂಬುದನ್ನೂ, ಪ್ರಾಚೀನ ಭಾರತ ಕಪ್ಪು ಬಣ್ಣದ ಆರಾಧನೆಯಲ್ಲಿ ತೊಡಗಿದ್ದುದನ್ನೂ ಲೋಹಿಯಾ ನೆನಪಿಸಿದರು.

ಇಂಡಿಯಾದಲ್ಲಿ ಜಾತಿಭೇದ ಹಾಗೂ ಜಗತ್ತಿನಲ್ಲಿ ವರ್ಣಭೇದ ಮಾಡುವ ಬಿಳಿಯರ ಮೇಲಾಟ ಎರಡೂ ಬಿಳಿ ಬಣ್ಣಕ್ಕೆ ಪ್ರತಿಷ್ಠೆ ದೊರಕಿಸಿಕೊಟ್ಟಿವೆ ಎಂಬುದನ್ನು ಕಂಡುಕೊಂಡ ಲೋಹಿಯಾ ರಾಜಕೀಯ ಅಧಿಕಾರಕ್ಕೂ, ಸೌಂದರ್ಯಮೀಮಾಂಸೆಗೂ ಇರುವ ಸಂಬಂಧವನ್ನು ಗುರುತಿಸಿದರು:

'ಯುರೋಪಿನ ಬಿಳಿಯರಂತೆ ಆಫ್ರಿಕಾದ ನೀಗ್ರೋಗಳು ಜಗತ್ತನ್ನು ಆಳಿದ್ದರೆ ಹೆಣ್ಣಿನ ಸೌಂದರ್ಯ ಲಕ್ಷಣಗಳೇ ಬೇರೆಯಾಗಿರುತ್ತಿದ್ದವು. ಆಗ ಕವಿಗಳೂ, ಲೇಖಕರೂ ನೀಗ್ರೋ ಚರ್ಮದ ಮೃದುವಾದ ರೇಶಿಮೆ ನುಣುಪನ್ನು, ಸತ್ವೋದ್ರೇಕಗೊಳಿಸುವ ಅದರ ಸ್ಪರ್ಶವನ್ನು, ಹಾಗೂ ಕಣ್ತುಂಬುವ ಸೊಬಗನ್ನು ಕುರಿತು ಮಾತಾಡಿಕೊಳ್ಳುತ್ತಿದ್ದರು; ಹಾಡು ಕಟ್ಟುತ್ತಿದ್ದರು. ಅವರ ತುಟಿ, ಮೂಗುಗಳಲ್ಲಿ ಕಾಣುವ ರಸ ಕಲ್ಪನೆಯ ಕಡೆಗೆ ಸೌಂದರ್ಯ ಪ್ರಜ್ಞೆ ಹೊರಳುತ್ತಿತ್ತು. ರಾಜಕಾರಣವೂ ಸೌಂದರ್ಯದ ಕಲ್ಪನೆಯನ್ನು ರೂಪಿಸಬಲ್ಲದು.'

ಹೆಣ್ಣಿನ ಮೈಬಣ್ಣ ಕುರಿತು ಬರೆಯುತ್ತಾ ಲೋಹಿಯಾ ಮೈದುಂಬುತ್ತಾರೆ:

'ಮೈಬಣ್ಣದ ಕಪ್ಪು ಬಿಳುಪುಗಳ ನಡುವೆ ಆಯ್ಕೆ ಮಾಡಹೊರಡುವುದರಲ್ಲಿ ಅರ್ಥವಿಲ್ಲ, ನಿಜ. ಆದರೂ ಮನಸ್ಸಿನಲ್ಲಿ ಅಚ್ಚೊತ್ತಿರುವ ಕೆಲವು ಅಂಶಗಳನ್ನು ಇಲ್ಲಿ ಗುರುತಿಸಿ ಹೇಳಿಬಿಡಬಹುದು. ಸ್ತ್ರೀಯರೆಲ್ಲ ಚಂದವಾಗಿಯೇ ಇರುತ್ತಾರೆ. ಅದರಲ್ಲೂ ಕೆಲವರು ತುಂಬ ಚಂದವಾಗಿರುತ್ತಾರೆ. ತುಂಬ ಚಂದವಾಗಿರುವ ಬಿಳಿ ಮೈಬಣ್ಣದವರು ಬಿಚ್ಚು ಮನಸ್ಸನ್ನೂ ಮುಗ್ಧತೆಯನ್ನೂ ಸೂಸುವಂತಿರುತ್ತಾರೆ. ಆಪ್ಯಾಯಮಾನವೆನ್ನಿಸುತ್ತಾರೆ. ಸ್ಫಟಿಕಜಲ ಅಲೆಯಾಡಿ ಜುಗುಳುವ ಹಳ್ಳದಂತೆ ಅಥವಾ ಇನ್ನೂ ಸರಿಯಾಗಿ ಹೇಳುವುದಾದರೆ – ಪರ್ವತವಾಹಿನಿಯ ಪಾರದರ್ಶಕ ಆಳದಂತೆ, ಬೆಳದಿಂಗಳಿನ ಲಘು ರಾಶಿಯಂತೆ. ತುಂಬ ಚಂದವಾಗಿರುವ ಕಪ್ಪು ಮೈಬಣ್ಣದವರಾದರೋ ಜೀವನದ ಹಾಗೂ ಸೃಷ್ಟಿಯ ಗೂಢವನ್ನು ತೇಲಿಸಿದಂತಿರುತ್ತಾರೆ; ಮೀನುಗಳಿಗೆ ಕಣ್ಣು ಕೊಡುವ, ಹೆಣ್ಣಾನೆಗೆ ಮೆಲುನಡೆ ಕೊಡುವ, ಮುಸ್ಸಂಜೆಯ ರಹಸ್ಯಗರ್ಭಕ್ಕೆ ವಿಶ್ರಾಂತಿ ವಿಲಾಸ ಕೊಡುವ ಮರ್ಮವನ್ನು ಅರಳಿಸಿದಂತಿರುತ್ತಾರೆ; ಆಳ ಆಳವನ್ನು ಆಹ್ವಾನಿಸುವಂತಿರುತ್ತಾರೆ.'

ಈ ಸೌಂದರ್ಯಮೀಮಾಂಸೆಯ ನಡುವೆಯೇ 'ಜಗತ್ತಿನ ಅತಿ ದೊಡ್ಡ ದಬ್ಬಾಳಿಕೆಗಳಲ್ಲಿ ವರ್ಣ ಹಿಂಸೆಯೂ ಒಂದು' ಎಂದು ಬರೆದಿದ್ದ ಲೋಹಿಯಾ, ಅದೇ ವರ್ಷ ಬರೆದ 'ಮೈ ಬಣ್ಣದ ಪ್ರಶ್ನೆ' ಎಂಬ ಲೇಖನದಲ್ಲಿ ಸಮಸ್ಯೆಯ ಮತ್ತೊಂದು ಮುಖವನ್ನು ಚರ್ಚಿಸುತ್ತಾರೆ. ಕೆ. ಪುಟ್ಟಸ್ವಾಮಿ ಈ ಲೇಖನವನ್ನು ಕನ್ನಡಿಸಿದ್ದಾರೆ. ಸಂಪತ್ತಿನ ಉತ್ಪಾದನೆ, ಶಸ್ತ್ರಾಸ್ತ್ರಗಳ ಏಕಸ್ವಾಮ್ಯ, ರಾಜಕೀಯಾಧಿಕಾರ, ಚರಿತ್ರೆಯ ಆಕಸ್ಮಿಕ ಘಟನೆಗಳು ಇವೆಲ್ಲವೂ ಸೇರಿ ಬಿಳಿಯರು ಕಪ್ಪು ಜನರ ನಾಡಾದ ದಕ್ಷಿಣ ಆಫ್ರಿಕಾದಲ್ಲೂ, ಅಮೆರಿಕದಂಥ ದೇಶದಲ್ಲೂ ಕರಿಯರನ್ನು ನಿಯಂತ್ರಿಸುತ್ತಿರುವುದನ್ನು ಲೋಹಿಯಾ ತೋರಿಸುತ್ತಾರೆ. ಅಮೆರಿಕದಲ್ಲಿ ಕರಿಯರು ತಮ್ಮ ಚರ್ಮದ ಬಗೆಗೆ ನಿಕೃಷ್ಟ ಭಾವನೆ, ಕೀಳರಿಮೆಗಳಿಗೆ ತುತ್ತಾಗಿರುವುದನ್ನೂ ಗಮನಿಸುತ್ತಾರೆ. ವರ್ಣಭೇದ ನೀತಿಯ ಪ್ರಬಲವಿರೋಧಿಗಳಾದ ಕರಿಯರು ಇದನ್ನು ಹೋಗಲಾಡಿಸಲು ಬಿಳಿಯರ ನೆರವನ್ನು ಪಡೆಯುವುದೂ ಅನಿವಾರ್ಯ; ಬಿಳಿಯರು ಮತ್ತು ಕರಿಯರಿಬ್ಬರಿಗೂ ಸ್ವೀಕೃತವಾಗುವಂಥ ನೀತಿ ನಿರೂಪಣೆ, ದ್ವೇಷರಾಹಿತ್ಯ, ಇವೆಲ್ಲವೂ ಅಗತ್ಯ ಎಂಬುದನ್ನೂ ಲೋಹಿಯಾ ಕಂಡುಕೊಳ್ಳುತ್ತಾರೆ.

ಬಿಳಿಯರು ಜಗತ್ತಿನಲ್ಲಿ ಕಳೆದ ಐನೂರು ವರ್ಷಗಳಿಂದ ಮಾಡುತ್ತಾ ಬಂದಿರುವ ಬಣ್ಣದ ಆಧಾರದ ಭೇದಭಾವ ಭಾರತದ ಜಾತಿಪದ್ಧತಿಯಲ್ಲಿ ಐದು ಸಾವಿರ ವರ್ಷಗಳಿಂದ ಅಥವಾ ಕೊನೇ ಪಕ್ಷ ಮೂರು ಸಾವಿರ ವರ್ಷಗಳಿಂದ ಇರುವುದನ್ನು ಲೋಹಿಯಾ ಆರಂಭದಿಂದಲೂ ಎತ್ತಿ ಹೇಳುತ್ತಿದ್ದರು; ಜಾತಿಭೇದದ ವಿರುದ್ಧ ಜೀವಮಾನದ ಯುದ್ಧ ಹೂಡಿದ್ದ ಲೋಹಿಯಾ, ಚಿಂತನೆ, ರಾಜಕಾರಣ, ಆರ್ಥಿಕ ಪರಿಹಾರ, ಮೀಸಲಾತಿ ಹಾಗೂ ಚಳುವಳಿ ಮುಂತಾದ ಎಲ್ಲ ಮಾರ್ಗಗಳನ್ನೂ ಜಾತಿವಿನಾಶಕ್ಕಾಗಿ ಅಣಿಗೊಳಿಸುತ್ತಿದ್ದರು. ಅರವತ್ತರ ದಶಕದಲ್ಲಿ ಅಮೆರಿಕದಲ್ಲಿ ವರ್ಣಭೇದದ ವಿರುದ್ಧ ಕೂಡ ನಿಂತರು.

* * *

ಲೋಹಿಯಾ ಜರ್ಮನಿಯ ಬರ್ಲಿನ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗ ಪ್ಯಾರಿಸ್‌ನಲ್ಲಿ ಮ್ಯಾಕಿನ್ ಎಂಬ ಅಮೆರಿಕನ್ ತರುಣಿಯನ್ನು ಭೇಟಿ ಮಾಡಲು ಹೋಗಿದ್ದರು; ಆಗ ಅವರನ್ನು ಆಕೆಯಿದ್ದ ಅಪಾರ್ಟ್‌ಮೆಂಟಿನ ಒಳಗೆ ಸೇರಿಸಿರಲಿಲ್ಲ. ಆಗ ಲೋಹಿಯಾಗೆ ವರ್ಣಭೇದ ನೀತಿಯ ಪ್ರತ್ಯಕ್ಷ ಅನುಭವವಾಗಿತ್ತು. 1964ರಲ್ಲಿ ಅಮೆರಿಕ ಪ್ರವಾಸದಲ್ಲಿದ್ದ ಲೋಕಸಭಾ ಸದಸ್ಯ ಲೋಹಿಯಾ ಮಿಸಿಸಿಪ್ಪಿಯ ಜಾಕ್‌ಸನ್ ಎಂಬ ಊರಿನಲ್ಲಿ ವರ್ಣಭೇದವನ್ನು ಎದುರಿಸಬೇಕಾಯಿತು; ಅಲ್ಲಿನ ಕಪ್ಪು ಹೋರಾಟಗಾರರು ಹೋಟೆಲ್ಲೊಂದರಲ್ಲಿ ಕಾರ್ಯಕ್ರಮವೊಂದಕ್ಕೆ ಲೋಹಿಯಾರನ್ನು ಆಹ್ವಾನಿಸಿದರು. ಕಾರ್ಯಕ್ರಮಕ್ಕೆ ಪೂರ್ವಾನುಮತಿಯೂ ಇತ್ತು. ಲೋಹಿಯಾ ಅಲ್ಲಿಗೆ ಹೋದಾಗ ಹೋಟೆಲ್ ಮಾಲೀಕ ಅವರನ್ನು ಒಳಗೆ ಬಿಡಲು ನಿರಾಕರಿಸಿದ. ಅಮೆರಿಕದಲ್ಲಿ ವರ್ಣಭೇದವನ್ನು 'ರಕ್ಷಿಸುತ್ತಿದ್ದ' ಜಿಮ್ ಕ್ರೋ ಕಾನೂನುಗಳ ಕ್ರೌರ್ಯ ಲೋಹಿಯಾ ಅನುಭವಕ್ಕೆ ಬಂತು.

ಹದಿನಾರನೆಯ ಶತಮಾನದಿಂದಲೂ ಆಫ್ರಿಕಾ ಖಂಡದಿಂದ ಯುರೋಪಿನ ದೇಶಗಳಿಗೆ ಹಾಗೂ ಅಮೆರಿಕದ ಪ್ರಾಂತಗಳಿಗೆ ಗುಲಾಮರಾಗಿ ಸಾಗಿಸಲ್ಪಟ್ಟ ಆಫ್ರಿಕನ್ನರ ಸ್ಥಿತಿ ದಾರುಣವಾಗಿತ್ತು. ಬಿಳಿಯರು ಅವರನ್ನು 'ನೀಗ್ರೋ', 'ನಿಗ್ಗರ್'